ಮೂಲ ದಾವಾ ನಂಃ 106/2016

ಡಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **15-11-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್. ವಕೀಲರಿಂದಃ**

ವಾದಿ ನನ್ನ ಅಣ್ಣ. ವಾದಿ ಮತ್ತು ಅವನ ಹೆಂಡತಿ ಕಡತೋಕಾದಲ್ಲಿ ವಾಸವಾಗಿದ್ದಾರೆ. ವಾದಿಯು ವ್ಯವಹಾರಿಕವಾಗಿ ಚತುರನಾಗಿದ್ದಾನೆ. ವಾದಿಯೇ ಅವನ ಮನೆಯ ವ್ಯವಹಾರವನ್ನು ಮಾಡುತ್ತಾನೆ. ವಾದಿಗೆ ವ್ಯವಹಾರದಲ್ಲಿ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. ಸ.ನಂಃ 58 ಹಿಸ್ಸಾ 4 ನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿಯೇ ನಮ್ಮ ತಂದೆ ಮತ್ತು ನಾವು ಎಲ್ಲರೂ ಸಾಗುವಳಿಯನ್ನು ಮಾಡುತ್ತಿದ್ದೆವು. ಸದ್ರಿ ಸ.ನಂಃ 58 ಹಿಸ್ಸಾ 4 ಸ್ವತ್ತನ್ನು ನಾವು ಖರೀದಿ ಮಾಡುವ ಮೊದಲು ಅದು ಭೂ ನ್ಯಾಯ ಮಂಡಳಿಯಿಂದ ನಮಗೆ ಮಾರಾಟ ಮಾಡಿದ ಗಜಾನನ ನಾರಾಯಣ ಭಟ್ಟ ಅವರಿಗೆ ಪ್ರಾಪ್ತವಾಗಿತ್ತು ಎಂದರೆ ಸರಿ. ಗಜಾನನ ನಾರಾಯಣ ಭಟ್ಟ ಅವರ ತಂದೆ ನಾವು ಭೂ ನ್ಯಾಯ ಮಂಡಳಿಗೆ ಅರ್ಜಿಯನ್ನು ತುಂಬುತ್ತೇವೆ ನಮಗೆ ಪ್ರಾಪ್ತವಾದ ನಂತರ ನಿಮಗೆ ಮಾರಾಟ ಮಾಡುತ್ತೇವೆ ನೀವು ಅರ್ಜಿಯನ್ನು ತುಂಬಬೇಡಿ ಎಂದು ನಮ್ಮ ತಂದೆಯವರಿಗೆ ಹೇಳಿದ್ದರು ಎಂದರೆ ಸರಿ. ಅದಕ್ಕಾಗಿ ನಮ್ಮ ತಂದೆಯವರು ಭೂ ನ್ಯಾಯ ಮಂಡಳಿಗೆ ಸದ್ರಿ ಸ್ವತ್ತಿನ ಬಗ್ಗೆ ಅರ್ಜಿಯನ್ನು ತುಂಬಿಲ್ಲ ಎಂದರೆ ಸರಿ. ಸದ್ರಿ ಸ್ವತ್ತಿನಲ್ಲಿ ನನ್ನ ತಂದೆಯವರು ಮೂಲತಃವಾಗಿ ಸಾಗುವಳಿಯ ಹಕ್ಕಿತ್ತು ಎಂದರೆ ಸರಿ. ಸದ್ರಿ ಸ್ವತ್ತನ್ನು ನಮ್ಮ ತಂದೆಯವರು ಒಟ್ಟೂ ಕುಟುಂಬನಾತೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ಪಿತ್ರಾರ್ಜಿತ ಆಸ್ತಿಯ ಆದಾಯದ ಹೊರತಾಗಿ ವ್ಯಾಪಾರವನ್ನು ಮಾಡುತ್ತಿದ್ದುದರ ಆದಾಯ ಇತ್ತು. ಸದ್ರಿ ಆದಾಯವನ್ನು ಬೇರೆ ಬೇರೆಯಾಗಿ ಮೆಂಟೇನ್ ಮಾಡುತ್ತಿರಲಿಲ್ಲ. ನಾವು ವ್ಯಾಪಾರ ವಹಿವಾಟುಗಳನ್ನು ಮಾಡಿಕೊಂಡ ಬಗ್ಗೆ ಪ್ರತ್ಯೇಕವಾಗಿ ಅವುಗಳ ಆದಾಯದ ಬಗ್ಗೆ ಅಕೌಂಟನ್ನು ಮೆಂಟೇನ್ ಮಾಡಿದ್ದು ಇರುವುದಿಲ್ಲ. ನಮಗೆ ಒಟ್ಟೂ ಕುಟುಂಬದ ಆಸ್ತಿಯ ಆದಾಯದ ಹೊರತಾಗಿ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ನಾವು ವ್ಯಾಪಾರ ವಹಿವಾಟು ಮಾಡಿದ ಬಗ್ಗೆ ನಮ್ಮ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು 6 ನೇ ತರಗತಿ ಇದ್ದಾಗಿನಿಂದಲೇ ವ್ಯಾಪಾರವನ್ನು ಮಾಡುತ್ತಿದ್ದೆನು. ನಾನು ಎಷ್ಟು ಬಂಡವಾಳವನ್ನು ಹೂಡಿದ್ದೆನು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಬಂಡವಾಳವನ್ನು ಮಾರವಾಡಿಯಿಂದ ಸಾಲ ಪಡೆದು ಹಾಕಿದ್ದೇನೆ. ನಮಗೆ ಸದ್ರಿ ವ್ಯಾಪಾರದಿಂದ ವಾರ್ಷಿಕವಾಗಿ ಎಷ್ಟು ಆದಾಯ ಬರುತ್ತಿತ್ತು ಎಂಬುದನ್ನು ಹೇಳಲು ಆಗುವುದಿಲ್ಲ. ನನ್ನ ತಂದೆಯವರು ಸಾಯುವ ಕಾಲಕ್ಕೆ ನನ್ನ ಜೊತೆಯಲ್ಲಿಯೇ ವಾಸವಾಗಿದ್ದರು. ನನ್ನ ತಂದೆ ಅನಾರೋಗ್ಯಕ್ಕೀಡಾದಾಗ ಅವರಿಗೆ ಚಿಕಿತ್ಸೆಯನ್ನು ಕೊಡಿಸಿ ನಾನೇ ಸಲುಹಿದ್ದೇನೆ. ನನ್ನ ತಂದೆ ಅನಾರೋಗ್ಯಕ್ಕೀಡಾದ ನಂತರ ಅವರು ಸಾಯುವ ಕೊನೆಯವರೆಗೂ ನಾನೇ ಅವರ ವ್ಯವಹಾರವನ್ನು ಅಂದರೆ ಭೂವ್ಯವಹಾರ ಮತ್ತು ದಾಖಲೆಗಳ ವ್ಯವಹಾರವನ್ನು ನೋಡಿಕೊಂಡು ಬಂದಿದ್ದೇನೆ. ನನ್ನ ತಂದೆಯವರ ಕಡೆಯಿಂದ ವಿಲ್‌ನ್ನು ನಾನೇ ಮುಂದೆ ನಿಂತು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ವಿಲ್ ನನ್ನ ತಂದೆಯವರು ಯಾವಾಗ ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಸದ್ರಿ ವಿಲ್ ನನ್ನ ತಂದೆಯವರು ವಕೀಲರಿಂದ ಬರೆಸಿದ್ದು ಅದು ಯಾವ ವಕೀಲರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿ ಹೋದ ನಂತರ ಸದ್ರಿ ವಿಲ್ ನನ್ನ ತಾಯಿಯ ಹತ್ತಿರ ಇದ್ದು ಅದನ್ನು ನನ್ನ ತಾಯಿ ನನಗೆ ನೀಡಿರುತ್ತಾರೆ. ನನ್ನ ತಂದೆ ಸಾಯುವ ಕೊನೆಯ ಕ್ಷಣದಲ್ಲಿ ಅವರು

ವಿಲ್ ಬರೆದಿಟ್ಟ ಬಗ್ಗೆ ನನ್ನ ಮುಂದೆ ಹೇಳಿ ಸದ್ರಿ ವಿಲ್ ನನ್ನ ತಾಯಿಯ ಹತ್ತಿರ ಕೊಟ್ಟಿದ್ದಾಗಿ ಹೇಳಿದ್ದರು. ನನ್ನ ತಂದೆ ತೀರಿ ಹೋದ 15 ದಿನಗಳ ತರುವಾಯ ನನ್ನ ತಾಯಿ ಸದ್ರಿ ವಿಲ್ ನನಗೆ ನೀಡಿರುತ್ತಾರೆ. ಸದ್ರಿ ವಿಲ್ ಗೆ ಸಾಕ್ಷಿದಾರರು ಯಾರೆಂಬುದು ನನಗೆ ಗೊತ್ತಿಲ್ಲ. ನಾನು ಸದ್ರಿ ವಿಲ್ ನ್ನು ಸಹಿ ಹಾಕಿದ ಸಾಕ್ಷಿದಾರರ ಹೆಸರನ್ನು ನೋಡಿದ್ದೇನೆ. ಆದರೆ ನನಗೆ ಈಗ ನೆನಪಿಲ್ಲ. ಸದ್ರಿ ವಿಲ್ ನ್ನು ನನ್ನ ತಂದೆಯವರು ಸ್ವ ಖುಷಿಯಿಂದ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ವಿಲ್ ಬರೆಯುವಂತೆ ನನ್ನ ತಂದೆಯವರಿಗೆ ನಾನು ಒತ್ತಾಯ ಮಾಡಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಸಾಯುವ ಪೂರ್ವದಲ್ಲಿ ವಿಲ್ ಬರೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ವಿಲ್ ಬರೆಯಲು ವಕೀಲರಿಗೆ ನಾನೇ ಮಾಹಿತಿ ನೀಡಿ ಅದನ್ನು ಬರೆಸಿ ಒತ್ತಾಯ ಪೂರ್ವಕವಾಗಿ ನನ್ನ ತಂದೆಯವರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವಾಗ ಅವಿಭಕ್ತ ಕುಟುಂಬದ ಮೇನೇಜರ್ ನಾನೇ ಆಗಿದ್ದೇನು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.